# ‘ನೃತ್ಯಾಧ್ಯಯನದ್ವಾರಾ ಶಿವಾರಾಧನೆ’– ಕಲಾಗೌರಿಯಲ್ಲಿ ನೂಪುರ ಭ್ರಮರಿ ನೃತ್ಯಸಂಶೋಧನ ವಿಚಾರಸಂಕಿರಣ

**ವರದಿ : ವಿಷ್ಣುಪ್ರಸಾದ್ ಎನ್. ಇವರಿಂದ.**

**ನೂಪುರಭ್ರಮರಿಯು ತನ್ನ ದಶಮಾನೋತ್ಸವ ಪೂರ್ಣತೆಯ ಸಂಭ್ರಮದಲ್ಲಿ ‘ಕಲಾಗೌರಿ’ಯ ಸಹಭಾಗಿತ್ವದಲ್ಲಿ ಮಹಾಶಿವರಾತ್ರಿಯಂದು *ನೃತ್ಯಾಧ್ಯಯನದ್ವಾರಾ ಶಿವಾರಾಧನೆ*ಯನ್ನು ರಾಜ್ಯಮಟ್ಟದ ನೃತ್ಯಸಂಶೋಧನಾ ವಿಚಾರಸಂಕಿರಣವನ್ನು ಬಸವನಗುಡಿಯ ಕಲಾಗೌರಿ ಸಭಾಂಗಣದಲ್ಲಿ ಹಮ್ಮಿಕೊಂಡಿತ್ತು.**

ಪೂರ್ವಾಹ್ನ ನಡೆದ ಕಾರ್ಯಕ್ರಮದಲ್ಲಿ ನಟರಾಜ ಶಿವನಿಗೆ ನೂಪುರ ಭ್ರಮರಿ ಮತ್ತು ಕಲಾಗೌರಿ ಸಂಸ್ಥೆಯ ಎಲ್ಲಾ ಸದಸ್ಯರು ಶಿವರಾತ್ರಿ ವಿಶೇಷ ಪೂಜೆಯನ್ನು ಪ್ರಾರ್ಥನೆ, ವೇದಘೋಷ, ಫಲಸಮರ್ಪಣೆ, ಅರ್ಚನೆ, ಆರತಿಗಳಿಂದ ನೆರವೇರಿಸಿ ಗೆಜ್ಜೆಗಳಿಗೆ ಅಭಿವಂದಿಸಿದರು. ಮಧ್ಯಾಹ್ನಾನಂತರದಲ್ಲಿ ಮೇಘಾ ಶ್ರೀನಿವಾಸ್ ಅವರ ಪ್ರಾರ್ಥನೆ ಮತ್ತು ಡಾ. ಮನೋರಮಾ ಬಿ.ಎನ್ ಅವರಿಂದ ಸ್ವಾಗತ ಭಾಷಣದಿಂದ ವಿಚಾರಸಂಕಿರಣ ಆರಂಭಗೊಂಡಿತು.





**ವಿಚಾರಸಂಕಿರಣದ ಶೀರ್ಷಿಕೆ– ಶಾಸ್ತ್ರಾನ್ವಯದ ಪ್ರಯೋಗದೃಷ್ಟಿಯತ್ತ ನೃತ್ಯಚಿಂತನವೆಂದಾಗಿದ್ದು; ಈ ಆಶಯಕ್ಕನುಗುಣವಾಗಿ ಅನುಪಮಾ ಜಯಸಿಂಹ** – ಅಡವುಗಳ ಸಂಸ್ಕೃತ ಆಧಾರದ ಕುರಿತು, **ರಂಜನಾ ನಾಗರಾಜ್** – ಅಡವು ಮತ್ತು ಹಸ್ತಮುದ್ರೆಗಳ ಸಾಂಖ್ಯಿಕ ವಿನ್ಯಾಸದ ಕುರಿತು; **ಮಧುಲಿಕಾ ಶ್ರೀವತ್ಸ–** ನಾಯಿಕೆಯರ ನೃತ್ಯಸಾಹಿತ್ಯಗಳಲ್ಲಿ ನಾಯಕಭಾವದ ಪಾತ್ರದ ಕುರಿತು; **ದೀಪ್ತಿಶ್ರೀ ಭಟ್ –** ನೃತ್ಯ ಮತ್ತು ನಾಟಕಗಳಲ್ಲಿ ಸಖಿಯರ ಕರ್ತವ್ಯ ಮತ್ತು ವರ್ಗೀಕರಣದ ಕುರಿತು ಸಂಶೋಧನ ಪ್ರಬಂಧಗಳನ್ನು

ನೃತ್ಯಸಹಿತವಾಗಿ ಮಂಡಿಸಿದರು. ಆ ಬಳಿಕ ಪ್ರಸ್ತುತ ವರ್ಷಗಳಲ್ಲಿ ನೂತನವಾಗಿ ವಿನ್ಯಾಸಗೊಳ್ಳುತ್ತಿರುವ ಪಾರಂಪರಿಕ ನೃತ್ತಬಂಧ ಅಲರಿಪ್ಪುವಿನ ನೂತನ ದೃಷ್ಟಿ ಮತ್ತು ಪ್ರಾಯೋಗಿಕ ಸವಾಲುಗಳ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು. ನಾಡಿನ ಅನೇಕ ಕಡೆಗಳಿಂದ ಆಗಮಿಸಿದ್ದ ನೃತ್ಯ ಅಧ್ಯಯನಕಾರರು, ವಿದ್ಯಾರ್ಥಿಗಳು ಮತು ಸಂಶೋಧಕರು ಈ ವಿಚಾರಸಂಕಿರಣದಲ್ಲಿ ಆಸಕ್ತಿಯಿಂದ ಪಾಲ್ಗೊಂಡಿದ್ದರು.



ವಿಶೇಷ ಉಪನ್ಯಾಸದಲ್ಲಿ **ಶ್ರೀ ಅರ್ಜುನ್ ಭಾರಧ್ವಾಜ್,** ವಿದ್ವಾಂಸರು, ಗ್ರೀಕ್ ಭಾಷಾಪಂಡಿತರು ಮತ್ತು ಸಹಾಯಕ ಪ್ರಾಧ್ಯಾಪಕರು, ಅಮೃತ ವಿಶ್ವವಿದ್ಯಾನಿಲಯ ಇವರಿಂದ – **ಗ್ರೀಕ್ ಮತ್ತು ಭಾರತದ ಕಲೆ ಹಾಗೂ ಅಲಂಕಾರಶಾಸ್ತ್ರದ ಬಂಧುತ್ವ, ಸಾಮ್ಯ ಹಾಗೂ ಅವೈಷಮ್ಯದ ಕುರಿತು ಮಾತನಾಡಿದರು. 'ಭಾರತ ಮತ್ತು ಗ್ರೀಕ್ ಸಂಸ್ಕೃತಿ ಹಾಗೂ ಕಲೆ ಪರಸ್ಪರ ಹೋಲಿಕೆಗಳನ್ನು ಹೊಂದಿದೆ. ಗ್ರೀಕ್ ಕೂಡಾ ಸನಾತನ ಧರ್ಮಕ್ಕೆ ತುಂಬಾ ಹತ್ತಿರದ್ದು. ಪೌರಾಣಿಕವಾಗಿ ಐತಿಹಾಸಿಕವಾಗಿ ಭಾರತದ ಸರಸ್ವತಿ ಮತ್ತು ದೃಷದ್ವತಿ ನದೀತೀರದಿಂದ ವಲಸೆ ಹೋದ ಮೂರು ಮುಖ್ಯ ಜನಾಂಗಗಳಲ್ಲಿ ಗ್ರೀಕ್ ಕೂಡಾ ಒಂದು. ಪೌರಾಣಿಕ ಪಾತ್ರಗಳಲ್ಲಿಯೂ, ಸಂಸ್ಕೃತ–ಗ್ರೀಕ್‌ಭಾಷೆಯಲ್ಲಿಯೂ, ಪೂಜೆ, ಪುನಸ್ಕಾರಗಳಲ್ಲಿಯೂ ಹಲವು ಬಗೆಯ ಸಾಮ್ಯತೆಗಳನ್ನು ಕಾಣಬಹುದು. ಸಂಸ್ಕೃತವೇ ಗ್ರೀಕಿಗೆ ಮಾತೃಭಾಷೆಯಂತೆ ನಡೆದುಕೊಂಡಿದೆ. ಭಾರತದಂತೆಯೇ ಧಾರ್ಮಿಕ ಸಂಸ್ಕಾರ ಅಥವಾ ಹಬ್ಬಗಳ ಜೊತೆಜೊತೆಯಲ್ಲಿ ಉತ್ಸವ, ಸಂಗೀತ–ನೃತ್ಯ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳೂ ಗ್ರೀಕ್‌ನಲ್ಲಿ ಹುಟ್ಟಿಕೊಂಡಿವೆ. ಪ್ರಾಚೀನ ಇರಾನಿಯರೂ, ರೋಮ್‌ನವರು ಇದೇ ಬಗೆಯಲ್ಲಿ ಸಾಮ್ಯತೆ ಹೊಂದಿದ್ದಾರೆ. ಇವರೆಲ್ಲರ ಮೂಲವೂ ಒಂದೇ ಬೇರಿನದ್ದು.**



**ಪಾಶ್ಚಾತ್ಯರು ಭಾರತ ಮತ್ತು ಇಲ್ಲಿನ ಸಂಸ್ಕೃತಿಗಳನ್ನು ಹೇಗೆ ಪೂರ್ವಾಗ್ರಹಿತರಾಗಿ ನೋಡಿದರೋ ಅದೇ ಬಗೆಯಲ್ಲಿ ಗ್ರೀಕನ್ನೂ ನೋಡಿದರು. ಧರ್ಮ ಮತ್ತು ದೇವರನ್ನು ಭಾರತದಾಚೆಗಿನ ಆಧುನಿಕರು, ಕ್ರಿಶ್ಚಿಯನ್ನರು**

ಅರ್ಥವಿಸಿಕೊಂಡ ರೀತಿಯೇ ಬೇರೆ. ಇದೇ ಮಾದರಿಯಲ್ಲಿ ಗ್ರೀಕನ್ನೂ ಬಿಬ್ಲಿಕಲ್ ನೆಲೆಯಲ್ಲಿ ಅಪಾರ್ಥ ಮಾಡಿಕೊಂಡರು. ಇದರಿಂದ ಕಲೆ ಮತ್ತು ಸಂಸ್ಕೃತಿಗಳೂ ಅಪವ್ಯಾಖ್ಯಾನ ಬೆಳೆದು ಹಲವು ಉತ್ಕೃಷ್ಟ ಕಲಾವಂತಿಕೆ ನಾಶವಾದವು. ಇದಾದ ಎಷ್ಟೋ ಶತಮಾನಗಳ ಬಳಿಕ ಕೆಲವು ಒಳ್ಳೆಯ ಕಲಾವಿದರಿಂದ ಮರು ನಿರ್ಮಾಣ ನಡೆದರೂ ಅದನ್ನು ಸರಿಯಾಗಿ ಮರುಜ್ಜೀವಿಸಿಕೊಳ್ಳಬೇಕಾದ ಅಗತ್ಯವಿದೆ. ಭಾರತೀಯ ಅಲಂಕಾರಶಾಸ್ತ್ರದಷ್ಟು ಗ್ರೀಕಿನ ಕಲಾಮೀಮಾಂಸೆಯು ಸಮಗ್ರವಾಗಿಲ್ಲವಾದರೂ ಅಲ್ಲಿಯೂ ಸಾಕಷ್ಟು ತಲಸ್ಪರ್ಶಿ ಚಿಂತನೆಗಳು ನಡೆದಿವೆ. ಅವೆಲ್ಲವನ್ನೂ ಆಳವಾಗಿ ಅರ್ಥೈಸಿಕೊಂಡು ಸೋದರಸಂಬಂಧವನ್ನು ಯಶಸ್ವಿಯಾಗಿ ಸ್ಥಾಪಿಸಿಕೊಳ್ಳಬಹುದು' ಎಂದು ತಮ್ಮ ಕ್ಷೇತ್ರಕಾರ್ಯಾಧ್ಯಯನಗಳ ಛಾಯಾಚಿತ್ರ ಮತ್ತು ವರ್ಣಚಿತ್ರಪ್ರತಿಗಳನ್ನು ಪ್ರದರ್ಶಿಸುತ್ತಾ ಸಂಶೋಧನಾಧರಿತವಾಗಿ ಅವರು ಪ್ರತಿಪಾದಿಸಿದರು.




ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ನೂಪುರ ಭ್ರಮರಿಯ ದಶವರ್ಷ ವಿಶೇಷ– ಆನ್‌ಲೈನ್ ಸಂಶೋಧನಾ ನಿಯತಕಾಲಿಕೆಯ ಸಮಗ್ರ ಆವೃತ್ತಿ ಅನಾವರಣಗೊಂಡಿತು. ಇದೇ ಸಂದರ್ಭ **ಕೆ.ಎನ್ ಅನಂತರಾಮಯ್ಯ (ಹಿರಿಯ ಆಯೋಜಕರು, ಬಿಟಿಎಂ ಕಲ್ಚರಲ್ ಅಕಾಡೆಮಿ) ಇವರಿಗೆ– 'ಕಲಾಯೋಜನಕೌಶಿಕ' ಎಂಬ ಬಿರುದನ್ನಿತ್ತು ಹಾಗೂ ಸುಬ್ಬುಕೃಷ್ಣ (ಸಹೃದಯೀ ಪ್ರೇಕ್ಷಕ ಮತ್ತು ಬರೆಹಗಾರ, ಸಂಘಟಕರು) ಇವರಿಗೆ– 'ಸಹೃದಯ ಸದ್ರತ್ನ' ಎಂಬ ಬಿರುದನ್ನಿತ್ತು ಸನ್ಮಾನಿಸಲಾಯಿತು. ಅಭಿನಂದನಾ ಭಾಷಣವನ್ನು ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರು ನೆರವೇರಿಸಿ ಸನ್ಮಾನ ಪತ್ರವನ್ನು ವಾಚಿಸಿದರು.**




'ವಿಮರ್ಶಾ ವಾಙ್ಮಯಿ', ಹಿರಿಯ ರಂಗಕರ್ಮಿ, ವಿದ್ವಾನ್ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಅವರು ಅಧ್ಯಕ್ಷೀಯ ಭಾಷಣವನ್ನು ಮಾಡುತ್ತಾ **ಸಂಶೋಧನ ಪ್ರಬಂಧಗಳ ಕುರಿತು ಭಾರತೀಯ ಕಲಾಸಂಸ್ಕೃತಿ ಎಷ್ಟೊಂದು ವಿಶಾಲವಾಗಿದೆ ಎಂದರೆ ನಾವೆಲ್ಲರೂ ಕುರುಡರು ಆನೆಯನ್ನು ಮುಟ್ಟಿ ತಮಗನಿಸಿದ ಅನಿಸಿಕೆಯನ್ನು ಹೇಳಿದಂತೆ ಹೇಳುತ್ತಾ ಹೋಗುತ್ತೇವೆ. ಇವುಗಳ ಮಸುಕುದೃಷ್ಟಿಯೂ ಕೂಡಾ ಒಂದೇ ಸಲಕ್ಕೆ ಗೊತ್ತಾಗುವುದಿಲ್ಲ. ಹೀಗಿದ್ದಾಗ ಹೊಸ ಹೊಳಹು ಬೇಕೆಂದರೆ ಅದಕ್ಕೆ ಇಂಥ ಸಂಶೋಧನಾ ಪ್ರಸಕ್ತಿಗಳನ್ನು ಯೋಜಿಸಿಕೊಂಡು ವಿಮರ್ಶಿಸಿದಾಗ ಹಳತಿನ ಮೌಲ್ಯಗಳನ್ನೂ ಉಳಿಸಿಕೊಳ್ಳುವ ಪ್ರಯತ್ನವಾಗುತ್ತದೆ. ಶೋಧನೆ ಎಂಬುದು ಇದೇ ಕ್ಷೇತ್ರದಲ್ಲಿ ಹೊರಟವರಿಗೆ ಪ್ರೇರಣೆ, ಪ್ರಚೋದನೆ, ಕ್ರಿಯಾಶೀಲರಾಗಿ ಇರಲು ಬೇಕಾದ ಸಂಪತ್ತನ್ನು ಕೊಡಮಾಡುತ್ತದೆ. ಈ ಯೋಗದಾನವೆಂಬುದರಲ್ಲಿ ನೂಪುರಭ್ರಮರಿಯಿಂದ ನಾಟ್ಯಕ್ಷೇತ್ರಕ್ಕೆ ಆದ ಕಾಲುವೆಯೇ ಈ ವಿಚಾರಸಂಕಿರಣ. ಇದರಿಂದ ಶೋಧಜಲ ಹರಿದುಬಂದಿದೆ. ನೀರು ನಿಂತರೆ ನಾರುತ್ತದೆ. ಆದರೆ ಕಲೆಯ ನೀರು ಹರಿಯುವಾಗ ನಿಲ್ಲಬೇಕೆಂದರೆ ಅದು ಸಹೃದಯನ ಚಿತ್ತದಲ್ಲಿ. ಆಗ ಅದು ರಸಸಂಸ್ಥಾಪನೆ ಎಂಬ ಮಿಗಿಲಾದ ಅರ್ಥ ಪಡೆಯುತ್ತದೆ. ನೂಪುರ ಭ್ರಮರಿಯ ಕಾರ್ಯಕ್ರಮಗಳು ರಸಸಂಸ್ಥಾಪನೆಗೆ ಹೆದ್ದಾರಿಯನ್ನು ತೆರೆದಿದೆ ಎಂದು ಆಶಿಸಿದರು.**

**ಹೊಸ ಸಂಶೋಧನೆ ಎಂಬುದು ಇಲ್ಲ. ಆದರೆ ಅವರವರಿಗೆ ಆವರೆಗೆ ಗೊತ್ತಿಲ್ಲದ್ದನ್ನು ಹುಡುಕಾಡಲಿಕ್ಕೆ ಹೊರಡುವ ಪ್ರಕ್ರಿಯೆಯಲ್ಲಿ ಹೊಸತನ್ನು ಕೊಟ್ಟೆವು ಎಂಬ ಭ್ರಮೆಯನ್ನು ತಾಳುವಂತೆ ಮಾಡುತ್ತದೆ. ಸಂಶೋಧನೆ ಎಂಬುದೇ ಒಂದು ದೀರ್ಘ ಶೃಂಖಲೆ. ಪೂರ್ವಸೂರಿಗಳ ನೆರವಿಲ್ಲದೆ ಅದನ್ನು ಮಾಡಲಾರೆವು. ಆದರೆ ಸಂಶೋಧನೆಯೆಂಬುದೇ ಕಳ್ಳತನವಾಗುತ್ತಿರುವ ಈ ಹೊತ್ತಿಗೆ ಒಳ್ಳೆಯ ಕಳ್ಳರಾದರೆ ಅಂದರೆ ಹಿಂದಿನ ಅಧ್ಯಯನಗಳನ್ನು ಗುರುತಿಸಿ ಗೌರವಿಸಿ ಅವುಗಳ ಮೌಲ್ಯಗಳನ್ನು ಹೆಕ್ಕಿ ತೆಗೆದು ಹೊಸ ನೋಟವೌ ಕೊಟ್ಟು ತನ್ನದಾಗಿಸಿಕೊಂಡರೆ ಒಳ್ಳೆಯದು. ಕೇವಲ ಒಂದೆಡೆ ಮಾಹಿತಿಗಳನ್ನು ಕೂಡಿ ಹಾಕಿ ದಾಖಲೀಕರಣ ಮಾಡುವುದರಿಂದ ಮುಂದೆ ನಡೆದು ಶೋಧನೆಗೆ ತೊಡಗಿಸಿಕೊಳ್ಳಬೇಕಿದೆ. ಅವುಗಳ ಮಂಡನೆಯಲ್ಲಿಯೂ ಶೋಧಕನಾದವನು ಪುಸ್ತಕದಲ್ಲಿರುವ ಮಾಹಿತಿಗಿಂತ ಹೆಚ್ಚಾಗಿ ತಾನು ಅರ್ಥವಿಸಿಕೊಂಡ ರೀತಿಯನ್ನು ಹೊರಹಾಕಬೇಕು, ಪ್ರಾತ್ಯಕ್ಷಿಕೆಯನ್ನು ನರ್ತನಶೋಧಕರು ಹೆಚ್ಚು ಯೋಜಿಸಿಕೊಂಡರೆ ಪ್ರೇಕ್ಷಕರಿಗೆ ಅನುಕೂಲ** ಎಂದು ವಿಮರ್ಶಾತ್ಮಕವಾಗಿ ಮಾತನಾಡಿದರು.



ವೇದಿಕೆಯಲ್ಲಿ ನೃತ್ಯಸಂಶೋಧಕಿ ಡಾ. ಶೋಭಾ ಶಶಿಕುಮಾರ್, ಸಂಘಟಕಿ ಶಾಲಿನಿ ವಿಠಲ್ ಮತ್ತು ನೂಪುರ ಭ್ರಮರಿಯ ಸಂಪಾದಕಿ, ಸಂಶೋಧಕಿ ಡಾ. ಮನೋರಮಾ ಬಿ.ಎನ್ ಉಪಸ್ಥಿತರಿದ್ದರು.




**ಪುರಸ್ಕೃತರಾದವರ ಪರಿಚಯ ಮತ್ತು ಪುರಸ್ಕಾರ ವಿಶೇಷತೆ**

**ಕಲಾಯೋಜನಕೌಶಿಕ** : ಕಲೆಯ ಆಯೋಜನೆಯಲ್ಲಿ ಅವಿಶ್ರಾಂತವಾಗಿ ತೊಡಗಿಸಿಕೊಂಡಿರುವ ವಿರಳ ಹಿರಿಯ ಸಂಘಟಕರಿಗೆ ನೀಡುವ ಪುರಸ್ಕಾರ. ಬಹುಷಃ ಈ ಬಗೆಯಾಗಿ ಆಯೋಜನೆಗೆಂದೇ ಮೀಸಲಾದ ಪುರಸ್ಕಾರ ಕಲಾವಲಯದಲ್ಲಿಯೇ ಬೇರೊಂದಿಲ್ಲ. ವಿಮರ್ಶಾ ಕ್ಷೇತ್ರದ ಅಪ್ಪಟ್ಟ ಅಮೂಲ್ಯ ವಿಮರ್ಶಕರನ್ನು ಗುರುತಿಸುವ 'ವಿಮರ್ಶಾ ವಾಙ್ಮಯಿ' ಎಂಬ ಪ್ರಪ್ರಥಮ ಪ್ರಯತ್ನದಂತೆಯೇ ನೂಪುರಭ್ರಮರಿಯ ಪಥಪ್ರಮುಖವಾದ ಮತ್ತೊಂದು ಹೆಜ್ಜೆಯಿದು. ಇದರ ಮೊದಲ ಸನ್ಮಾನವನ್ನು ಸ್ವೀಕರಿಸಿದವರು ಅನವರತವೂ ಅವಿಶ್ರಾಂತವಾಗಿ ಆಪ್ತವಾಗಿ ಕಲಾಪ್ರದರ್ಶನಗಳನ್ನು ಆಯೋಜಿಸುತ್ತಲೇ ಆದರಣೀಯರಾದ **ಶ್ರೀ ಕೆ.ಎನ್ ಅನಂತರಾಮಯ್ಯ.** ಕಿರಿಯ-ಹಿರಿಯ ಕಲಾವಿದರಿಗೆಲ್ಲಾ ಆಶ್ರಯಾಶ್ವತ್ಥರು. 80ನೇ ವಯಸ್ಸಿನ ಗಡಿ ದಾಟಿಯೂ ಬಾಲೋತ್ಸಾಹದಲ್ಲಿ, ತರುಣೌತ್ಸುಕ್ಯದಲ್ಲಿ, ವೃದ್ಧಾನುಭವಸಮೃದ್ಧಿಯಲ್ಲಿ

ಕ್ರಿಯಾಶೀಲರಾಗಿರುವ ಆಯೋಜಕರು. ಬಿಟಿಎಂ ಕಲ್ಚರಲ್ ಅಸೋಶಿಯೇಶನ್ ಸಂಸ್ಥೆಯ ನೆರಳಲ್ಲಿ ಅನಂತರಾಮಯ್ಯ ಏರ್ಪಡಿಸಿದ/ಏರ್ಪಡಿಸುತ್ತಿರುವ ವ್ಯವಸ್ಥಿತ ಗಾನನಾಟ್ಯಪ್ರದರ್ಶನಗಳೂ, ಅದರಿಂದ ಧನ್ಯರಾದ ಮಾನ್ಯರಾದ ಕಲಾವಿದರೂ, ಕಲಾಸ್ವಾದದಿಂದ ಸಂತೃಪ್ತರಾದ ಸಹೃದಯರೂ ಅಸಂಖ್ಯ.

**ಸನ್ಮಾನ ಸ್ವೀಕರಿಸಿ ಮಾತನಾಡಿದ ಅನಂತರಾಮಯ್ಯ ಅವರು– ಅನೇಕ ಸಂಸ್ಥೆಗಳಲ್ಲಿ ಸನ್ಮಾನ, ಗೌರವಗಳು ನಡೆಯುತ್ತವೆ. ಆದರೆ ಈ ಬಗೆಯ ಸನ್ಮಾನ ವಿಶೇಷ. ನನಗೆ ಇಂದು ದೊರೆತ ಸನ್ಮಾನ ನಮ್ಮ ಬಿಟಿಎಂ ಕಲ್ಚರಲ್ ಅಕಾಡೆಮಿಗೆ ಸಲ್ಲಬೇಕಾದಂತದ್ದು. ಕಲಾಕಾರ್ಯಕ್ರಮಗಳಲ್ಲಿ ಗಡಿಯಾರ ನಿಲ್ಲಬಾರದೇ ಎಂಬಷ್ಟು ಸಮಯವನ್ನು ಮೀರಿ ನಿಲ್ಲುವಷ್ಟು ಕಲೆ ನಮ್ಮನ್ನು ತೊಡಗಿಸಿಕೊಳ್ಳುತ್ತದೆ. ಅದರಲ್ಲೂ ಅವಕಾಶಗಳು ಎಂಬುದು ಒಮ್ಮೆ ಬಾಗಿಲು ಬಡಿಯುತ್ತವೆ. ಅದನ್ನು ಗುರುತಿಸಿಕೊಂಡು ಸದುಪಯೋಗ ಮಾಡಿಕೊಂಡರೆ ನಮ್ಮ ಜೀವನಕ್ಕೇ ಬಾಗಿಲು ತೆರೆಯುತ್ತವೆ. ಈವರೆಗೆ ಸಂಸ್ಥೆ ಪ್ರಾರಂಭವಾದಾಗಿನಿಂದ ಈವರೆಗೆ 525 ಕಾರ್ಯಕ್ರಮ ಮಾಡಿದ್ದೇವೆ. ಅವೆಲ್ಲದರಲ್ಲೂ ನಾನು ಭಾಗವಹಿಸಿದ್ದೇನೆ, ಉಳಿದಿದ್ದೇನೆ ಎಂಬ ಧನ್ಯತೆಯಿದೆ. ಶಿಸ್ತನ್ನು ಪಾಲಿಸುವ ನಿಷ್ಠೆಯನ್ನು ಕಲೆಯಲ್ಲಿ, ಜೀವನದಲ್ಲಿ ಮಾಡಿಕೊಂಡು ಬಂದರೆ ಅದರ ಫಲವನ್ನು ನಾವೇ ಉಣ್ಣುತ್ತೇವೆ. ಕಲೆಗಾಗಿ ಮಾಡಿದ್ದು ಎಂದಿದ್ದರೆ ಖಂಡಿತಾ ನಮಗೆ ವಾಪಾಸು ಅದು ಬೆಂಬಲಕ್ಕೆ ಬಂದು ನಿಲ್ಲುತ್ತದೆ.**




**ಸಹೃದಯೀ ಸದ್ರತ್ನ :** ಕಲಾವಿದರಿಗೆ ಸನ್ಮಾನ–ಪ್ರಶಸ್ತಿ–ಪುರಸ್ಕಾರಗಳು ಸರ್ವೇಸಮಾನ್ಯ ವಿಚಾರ. ಆದರೆ ಉತ್ತಮ ಪ್ರೇಕ್ಷಕರನ್ನು ಗುರುತಿಸಿ ಅವರೊಳಗಿನ ಸಹೃದಯತೆಯನ್ನು ಮಾನಿಸಿ ನೀಡೂತ್ತಿರುವ ಕಲಾಲೋಕದ ಮತ್ತೊಂದು ಪಥಪ್ರಮುಖ ಪ್ರಥಮ ಪ್ರಯತ್ನ ಈ ಪುರಸ್ಕಾರ. ಕಲೆಗೆ ಕಲಾವಿದರು ಎಷ್ಟು ಮುಖ್ಯರೋ ಅಂತೆಯೇ ಸಹೃದಯ ಪ್ರೇಕ್ಷಕರು. ಕಾರಯಿತ್ರೀ ಪ್ರತಿಭೆಯು ಭಾವಯಿತ್ರೀ ಪ್ರತಿಭೆಯೊಂದಿಗೆ ಸಂಗಮವಾದರೇನೇ ಕಲಾವೇದಿಯ ಪೂರ್ಣತ್ವ ಸಾಧನೆ.

ಈ ನಿಟ್ಟಿನಲ್ಲಿ ಮೊದಲ ಪುರಸ್ಕಾರ ಸಂದದ್ದು **ಶ್ರೀ ಸುಬ್ಬುಕೃಷ್ಣ** ಇವರಿಗೆ. ಬೆಂಗಳೂರು ಮಹಾನಗರದ ದೈನಂದಿನದ ಒಂದಲ್ಲೊಂದು ಕಲಾಂಗಣದಲ್ಲಿ ಕಾಣಿಸುವ ಇವರು ಪ್ರತಿಯೊಂದು ಕಲಾಕಾರ್ಯಕ್ರಮವನ್ನೂ ಬಿಡುಗಣ್ಣಿನಿಂದ ಕಂಡು, ಆಸ್ವಾದಿಸಿ, ಭಾವಾರ್ಣವದಲ್ಲಿ ಸಾನಂದವಾಗಿ ವಿಹರಿಸುವವರು. ತಾನು ಮಾತ್ರ ಕಲೆಯಿಂದ ಖುಷಿ ಪಡುವ ಭಾವಲೋಭಿಯಲ್ಲ ಇವರು. ತಾನು ಕಂಡುದರ ಧನಾಂಶಗಳನ್ನು ಹೆಕ್ಕಿ ಹೆಣೆದು ಕಲಾವಿದರನ್ನು ಮುಕ್ತವಾಗಿ ಶ್ಲಾಘಿಸಿ, ತನ್ನ ಸಂತೋಷಾನುಭವವನ್ನು ಅಕ್ಷರೀಕರಿಸಿ ವಿವರವಾದ ಕಲಾವಲೋಕಲೇಖವನ್ನು ಸಾಮಾಜಿಕ ಜಾಲತಾಣಗಳಲ್ಲಿ ನೂರಾರು ಜನರಿಗೆ ಹಂಚುವವರು. ಜೊತೆಗೆ ತಮ್ಮದೇ ಕೃಷ್ಣ ಕಲಾಕೇಂದ್ರದಿಂದ ಮಾಸಿಕ ಕಲಾಕಾರ್ಯಕ್ರಮಗಳನ್ನು ಅವಿರತವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ತಮ್ಮ ಕ್ಯಾನ್ಸರ್ ಖಾಯಿಲೆಯ ಇಕ್ಕಟ್ಟು ಬಿಕ್ಕಟ್ಟಿನ ಚಿಕಿತ್ಸೆ ನೋವುಗಳ ನಡುವೆಯೂ ಅವರು ನಗುತ್ತಿರುವುದಕ್ಕೆ ಕಾರಣ ಕಲೆ. ಅವರ ಕಲಾವಂತಿಕೆಯನ್ನು ಸನ್ಮಾನವು ಗೌರವಿಸಿದೆ.

ಪುರಸ್ಕಾರಗಳು ವಿದ್ವಾಂಸರಿಂದ ರಚಿಸಲ್ಪಟ್ಟ ತಾಮ್ರಪತ್ರ, ಹಣ್ಣುಹಂಪಲು, ಶಾಲು, ಹಾರ, ಬಿಲ್ವಪತ್ರೆಯ ಗಿಡ ಮತ್ತು ಗ್ರಂಥಗಳನ್ನೊಳಗೊಂಡಿತ್ತು.



**ಸಂಜೆ ನಡೆದ ಶಿವಾರ್ಪಣಂ- ಭರತನೃತ್ಯ ಕಾರ್ಯಕ್ರಮ ಮೇಘಾ ಶ್ರೀನಿವಾಸ್ ಮತ್ತು ಸಂಗೀತಾ ಅಯ್ಯರ್ (ಡಾ.ಶೋಭಾ ಶಶಿಕುಮಾರ್ ಅವರ ಶಿಷ್ಯೆಯರು) ಇವರಿಂದ ಮೂಡಿಬಂತು. ಬಾದಾಮಿಯ ಮಹಾನಟನ(ಶಿವ) ಕುರಿತು ಡಾ. ಮನೋರಮಾ ಬರೆದ ಮೊತ್ತ ಮೊದಲ ಕನ್ನಡ ನೃತ್ಯ ಸ್ತುತಿ-ಕೌತ್ವ, ಮಯೂರವಿನ್ಯಾಸದಲ್ಲಿ ಅರಳಿದ ಅಲರಿಪು ನೃತ್ತ ಪ್ರಮುಖ ನೂತನ ಬಗೆಯ ಅಧ್ಯಯನಾಧಾರಿತ ನೃತ್ಯಗಳಾಗಿ ನೆರೆದವರ ಮೆಚ್ಚುಗೆಗೆ ಪಾತ್ರವಾದವು.**







Its our pleasure to announce Megha Shrinivas and Sangeeta Iyer from MayuriNrityashala has successfully completed the Snaataka level of 108 NrittaKarana's of Natyashastra under the tutelage of Dr Shobha Shashikumar; and awarded same on 2nd March 2018 @ ADA Auditorium Bengaluru. Both of them has received first class in Lakshana and Prayoga examination. Their performance conceived by original thoughts @ Shivarpanam- Statelevel Dance Research symposium conducted by NoopuraBhramari and Kalagowri has sprinkled the fragrance to their merit. We feel proud to examine and certify it through Noopura Bhramari -which has a wing to dance studies for sincere learners. Congratulation to both.

# English Report

## ‘Shivaaraadhana through Nrityaadhyayana’ – A Dance Research Symposium by Noopura Bhramari in collaboration with Kalagowri

**- Vishnuprasad, N**

Noopura Bhramari, started by Dr. Manorama in the year 2007 has been a Dance magazine and has evolved itself into a Research Journal. It has its own Trust and has achieved many things first of its kind in the field of Art. It has been organizing Dance Research symposiums, Conferences, Publishing of books, Publishing of Research Articles, Documentation of Karnataka Nrutya/Yakshagana/Janapada research articles, Classes on Nattuvanga-Natyashastra-Puranakatha-cultural media-lakshana granthas, etc has been undertaken. There has been a lot of Lectures, Orientation programs, competitions, Research based Dance programs, The Critic award for the year, etc. and well appreciated by the general public. Similarly, **‘Kalagowri’**- Gowri Natyashala (2002) started in the year 2017 by Smt. Shalini. P. Vittal has sheltered many monthly programs in the field of Art without any bias to Junior/Senior artists or Style/sub-style etc.

**Noopura Bhramari in collaboration with Kalagowri had organized a State level Dance Research Symposium on the occasion of its completion of tenth year on the day of Mahashivarathri by way of Shivaaraadhana through Nrithyaadhyayana at Basavanagudi, Bengaluru.**

On the day of Symposium- The morning session started with obeisance to the Lord Nataraja and the Anklets by all the members of Noopura Bhramari and Kalagowri. Every one of them performed a special Pooja by way of prayers, vedic chants, offerings of flowers and fruits and finally the arathi. In the afternoon, the research symposium session started with a prayer by Smt. Megha Srinivas and welcome speech by Dr. Manorama. B.N.

The first paper presentation in the research symposium titled ‘Theorizing the practicality’, started with ‘Tracing the Adavu through the study of treatises in Sanskrit’ by **Smt. Anupama Jayasimha**. The second paper was presented by **Ranjana Nagaraja** on ‘Symbolic representation of Hastas and Adavus of Bharatanatyam’ (along with practical demo). The next paper was on ‘Role of Nayaka in Nayika composition’ (along with research based dance item) by **Smt. Madhulika Srivatsa**. **Smt. Deeptishri Bhat** presented a paper on ‘Classification, duties of Sakhi and her representation in dance and dramas (along with research based dance item). There was a Panel discussion followed by demonstration by **Smt. Divya Shivnarayan** on the subject of ‘Alaripu – Practicality and Newness’.

The whole session was witnessed by many students, coming from the whole state of Karnataka and many Researchers actively participated.

A special lecture by Sri. Arjun Bharadwaj (Scholar, writer, Bengaluru) was arranged on ‘Comparitive Art and Aesthetics of India and Greece. In his lecture- “Akin to the Indian Culture, the Greek culture was also closely linked to nature. Unlike the Semitic religions, in ancient Greek culture, both the creator and the creation were revered and worshiped. It is likely that the people who migrated out from the Sarasvati-Drshadvati basin in the past, are today's Greeks and thus the close resemblance of the cultures.’ he said.

Continuing further he said “Dr. SL Bhyrappa says, that myth creation is a sign of a living tradition. The Greeks, who were at their peak in about 4$^{th}$ Century BC had great creative and scientific mind. They had stories associated with every place, water body and very natural

phenomenon, just as we have sthaḻa-purāṇa in India even today. The death of the Greek civilization happened on the coming of the Semitic religions, which not only killed scientific thought but also all art forms. It was only with the coming of renaissance in Europe that classical art found its revival. Nāṭyaśāstra is an encyclopaedic work which not only teaches the poet and the actor but also trains a sahṛidaya to appreciate good art. There is unfortunately no parallel to it in any other culture of the world. Aristotle's 'Poetics' mainly deals with dramaturgy and gives us the yardsticks to measure the worth of a piece of art. It, however, does not tell us how good art can be produced. While Catharsis is purging of emotions as a result of art, Rasānanda is the experience of bliss due to the enjoyment of art. Although there are some such differences in the two cultures, it is for certain that they share the same umbilical cord. Arjun opined that the Greek art forms can be considered a deśi form of the pan-Indian mārga laid down by Bharata" he added.

Arjun Bharadwaj's presentation included a chronology of sculptures, paintings and mosaics from different eras of Europe. He brought out parallels between art forms and aesthetic principles of Greece and India. Arjun also explained how classical art has today taken the shape of 'modern art'.



The Evening program (Valedictory session) had Chair comments for paper presentation, Release of Noopura Bhramari's 10th Anniversary Online Research Journal issue. At the same time **Sri K.N. Ananthramayya** (organizer-BTM cultural academy) with the title **'Kalayojana Koushika'** and **Sri Subbukrishna** (writer and organizer) with the title **'Sahrdayi Sadratna'** was awarded with due Respects. Vid. Korgi Shankarnarayan Upadhyaya gave a scholarly speech and distributed the certificates.

**Kalayojanakoushika** is the title is given to the senior organizer who has involved himself in organizing continuous programmes restlessly. This type of title is not at all there in the field of Art. This has been another step of Noopura Bhramari for the first and foremost time similar to the title 'Vimarsha Vangmayi', which is given by identifying the best Critic. This title of Kalayojanakoushika has been accepted for the first time by the most revered organizer of many art performances **Sri. K.N. Anantaramayya**. He has been the most innovative organizer

and very young at heart though he has crossed the age of 80 years. He has organized and has been doing it under the organization BTM Cultural Association.

After the felicitation the awardee of the title Sri. K.N. Anantaramayya said that, ‘he has been respected by many organisations, but this is something unique. The Art involves us in any programmes. When there is an opportunity, it should be noticed and utilized. Only then the doors of our lives also get opened up. Right from the inception of our organization, we have organized 525 programmes and have been successful. I am grateful to be present in all these programmes. The outcome through sincerity and discipline in the Art can be felt in our ways of Life too. Anything done for the sake of Art becomes a support and stands as our backbone.’

It is a common affair of Respect, Award to the artists. But identifying a good spectator and respecting them has been the first of its kind in the field of Art. Artists and also God-hearted spectators are very important for any Art. Completeness is achieved only by a talented artist in combination with an emotional sahrudayi. Thus a connoisseur was feliciatated with the title **Sahrudayi Sadratna.** It was awarded for the first time to **Sri. Subbukrishna**. He is the erson who present in almost all the art programmes. He watches the programs with an open mind, relishes, and enjoys with all his feelings and appreciates the artist openly, writes down his experiences and shares it with hundreds of people. Also, he has been organizing monthly programs in his own Krishna Kalakendra institution. The awards included Tamrapatra, Fruits, Shawl, Garland, Books and Bilwa plant.

‘Vimarsha Vangmayi’, senior theatre artist, **Vid. Korgi Shankarnaryana Upadhyaya**, in his presidential speech spoke regarding the Research papers. He said that the Indian Art and culture is so vast that, all are understanding is limited by our own perceptions of it just like the blind understand the magnitude of an elephant by touching its parts. Hence it is difficult to fully realise the usefulness of the vision and the purpose behind this symposium at once. Newer innovations can come only when we understand the values of the past and analyze them. A new search in the field gives a good wealth of thought provoking, inspiring and innovative minds. The contribution of Noopura Bhramari to the field of Natya has been a channel for the Dance Research Symposium. The outcome of this is like that of the ‘distilled water’. Water should never get stagnant. But the flow of Art can become still only in the minds of Sahrdayas as an everlasting impact of enjoyment. This will become the pramana for rasa. The programmes organised by Noopura Bhramari have become like a ‘Highway’ in terms of rasottpatti.”

He also said that ‘there is nothing called New Research. But an individual in the journey of search gives something new which helps in sustenance. Research is a long chain. Without the basic foundation, it cannot be done. In the present scenario, where the research is being stolen, a person who has atleast respected the values of the hidden past and gives a new perspective is much better comparatively. A person should move a step further and get involved in Research in addition to collecting and documenting the information. Even while presenting, a researcher should present the ways of his understanding rather than the information provided in the books. A Dance Researcher should implement the practical adaptations which helps the audience too.”

Dance Researcher Dr. Shobha Shashikumar, Shalini. P. Vittal from ‘Kalagowri’ and the Editor of Noopura Bhramari and Researcher Dr. Manorama. B.N. were present on the stage.

**The evening session witnessed Bharatnrutya program by Smt. Megha Srinivas and Smt. Sangeeta Iyer (disciples of Smt. Dr. Shobha Shashikumar). The Badami Mahanata Koutwa, composed by Dr. Manorama and Mayura Alaripu was very well appreciated.**

Mayura Alarippu was performed by Sangeeta Iyer as Invocatory piece.Retaining the traditional structure of an alarippu-to be performed in three levels of sama, araimandi and muzhumandi; and in three speeds- this is an experiment to utilize the Bharatanrtyam language in the alarippu format to bring out the concept of a dancing peacock. The "Mayura Alarippu" as such is not a new concept. In fact, the dancer was inspired to create this piece after having watched one such rendition- she felt that the Mayura could be justified in angika by the use of Bharatanrtyam.

Traditionally, an alarippu is interpreted as the blooming of a flower- where the dancer is the flower, and she blooms to perform the rest of the margam. Sangeeta interpreted it as a peacock, which get inspired by clouds and dance in its own way. She has brought various karana into alarippu and this piece as the unfurling of the peacock for the rest of her recital. The vakyarthabhinaya which she incorporated in the angika of Alarippu nrita itself has made alarippu to reach its best of communication. It has taken wide applause too. It was set to Rupaka talam (Tisra Alarippu). It is available in https://youtu.be/A5Slp4PVvuo

The next piece was by Megha Shrinivas. She taken the concept on Mahanata Kouthvam (based on the Mahanata-shiva sculpture of Badami, Karnataka) composed by Dr. Manorama B.N. in Ragamalika and set to Khandachapu tala. Here the sutradhara visualized Mahanata as the one trying to please his dear consort Parvathi, who is upset that her Shiva is dancing along with Ganga. Shiva becomes the Mahanata and performs the karanas because he knows that dancing is easiest way to calm his Parvathi and pacify her. He performs Apaviddham, Nikuttkam, Rechitanikkuttitam, Akshptam, Sarpitam, Mattalii, Ardha matalli, Valitam, Lalitam, Dolapada, Bhujanagatrastarechitam, Bhujangatrasitam for Goddess Parvathi.



Parvathi laughs and thinks to herself that she is already within him and that she needs no convincing about his love for her and begins to dance along with him. She performs Avartam, Prushtaswastikam, Vakshasvastikam, Ardhasvastikam, upasrtakam along with Shiva. The sutradhara perceives Shiva and Shakti as 'one' and explains how both the energies are manifested in the same body and how they stand together as Ardhanaarishwara. Ganesha, who

watches the beautiful dance of Shiva and Parvathi comes in between to show off his dancing skills and performs Karihasta.

In concluding lyrical treatment, Sutradhara says that this Mahanata who shows himself in the human form is the greatest of the dancers and that his dance is a Veda for the dancers today. Sutradhara goes on to say that just one glance from this Great Mahanata would bring him all the happiness and contentment. These all elements were beautifully portrayed by Megha. It is available in https://youtu.be/kc0OdrBTxSM

'Aartha Piravi Tuyarkeda' composition of Manickavasagar was the next selection by Sangeeta Iyer. This song taken by Tiruvempavai which is based on in the Tiruvannamalai temple. Pavai means young girl, or maiden. In the month of December- January, young girls observe a penance or vow, called Pavai Nombu, during which they visit the Annamalai temple every day of the month, bathe in the temple tank and offer prayers to Siva. In doing so, they believe that He will bless them with a good husband. The situational context was Manickavasagar's Tiruvempavai hymns is the temple tank. All songs are composed as if being sung by these young girls while bathing in the tank before prayer. Manickavasagar was a 9th century Tamizh Saivite saint poet- who along with Appar, Sundarar, and Sambandar- is one of the Nalvars, or the four most important Saivite saints of the Bhakti period. Their compositions, together, called the Tirumurai, form the foundations of Tamizh Saivite philosophy.

The 12th song, which was presented by Sangeeta, spoken of the attributes of Siva as the cosmic dancer Nataraja in Chidambaram. He is the Divine Dancer in the Chit- Ambaram (or stage of consciousness), who dances with the Teertha (Ganga). He is the earth, He is the sky, and He is everything. He creates, protects and dissolves- this is His game. "Thus, singing of His praises, and thinking of His great attributes, let us bathe in this tank, my dear girls." Their bangles are jingling, their hair is swaying, and their ornaments hiss, as they bathe in the Poigai river, which has beautiful flowers all over it surrounded by buzzing bees. The girls fix their mind on Siva, and sing only His praise. Performance was set to Shankarabharanam raga and Aditala.






Later Megha performed kriti on goddess Lakshmi composed by Vid. R. K. Padmanabha, set to Nayaki raga and Khandachapu Tala.This kriti described the beauty of Goddess Lakshmi who is called 'Soumya nayaki' because of her grace and elegance and charming beauty which equals not 1 or 2 but a hundred Urvashis. The dancer requested beautiful goddess Lakshmi to bestow upon her grace and humility.




Sangeeta later taken the the first song of Tyagaraja's Nauka Charitram-___Srngarinchukoni Vedaliri. As many of us know, Nauka Charitram is a musical ballet (geya nataka) composed by Tyagaraja- having padyas, vachanas and dharus. The story is of Krsna's meeting with the gopikas at Yamuna- He meets them by the river side and takes them all on a boat ride on the scenic Yamuna river. As the story unfurls, we see how the pride and ego of the gopikas is removed by Krishna and his leelas. Srngarinchukoni is the first dharu of Nauka Charitram- which describes the ways in which the gopikas are getting ready to go meet Krishna. Each one is dressing up, and preparing in a different way to entice him. It was set to Surutti ragam and Aditalam.




Antahpurageethe composed by D. V. Gundappa set to Behag raga and adi tala was concluding piece performed by Megha Shrinivas. Here the sakhi finds her very good friend talking to a parrot and goes on to enquire what message she is sending with the parrot and to whom. She teases her friend that she has been hearing a lot of gossip about her from people and if it was all true. She also asks her why she is abusing few women and appreciating few other and what secrets of manmatha she is telling the parrot.

The sakhi asks Shukabhaashini to share both the matters that she is upset with and also those that make her happy. She goes to tell her to stop sending messages alone to her lord and instead meet him as he is very upset of not having met her. She questions Shukabhaashini if she could find no messenger other than the parrot to communicate about her love for lord Channakeshava. She complains that Shukabhaashini has neglected her very good friend and instead has had the parrot as her dhooti. Sakhi requests if she could be appointed as the messenger instead of the parrot as she would do a better job than the parrot.



In Vocals Kum Priyankaari Krishnan and Varsha R Krishna, in Nattuvangam: Smt. Madhulika Srivatsa, in Mrdangam Sri Betta venkatesh, and in flute Sri Skanda Kumar supported and brought a good feel.

The whole symposium was happened to be like 'Natya Jagara'- offering to Lord Shiva through a dhyana on Natya, in its own kind by bringing an integrated approach.

---------------